**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.</u>**

**ಅಸಲು ದಾವಾ ಸಂಖ್ಯೆ. 69/2019**

**ಪ್ರ.ಸಾ-2**

<u>ಸಾಕ್ಷಿಗೆ ದಿನಾಂಕಃ **24-06-2026** ರಂದು ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ಶ್ರೀ.ಎಂ.ಇ.ಹೆಚ್ ಪ್ರತಿವಾದಿಯರ ಪರ ವಕೀಲರಿಂದಃ</u>**

1. ವಾದಿಯು ದಾವಾ ಸ್ವತ್ತಿನ ಸ್ವಾಧೀನಾನುಬೋಗದಲ್ಲಿ ಇಲ್ಲ ಎಂದು ಹೇಳಲು ನಾನು ಯಾವುದೇ ದಾಖಲಾತಿಗಳನ್ನು ನೋಡಿಲ್ಲ. ದಾವಾ ಆಸ್ತಿಯು ವಾದಿಗೆ ಹೇಗೆ ಬಂತು ಎಂದು ನಾನು ತಿಳಿದುಕೊಂಡಿಲ್ಲ. ಪ್ರತಿವಾದಿಯು ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುವರು.

2. ನಿಪಿ 3 ರಲ್ಲಿ ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡಿರುವ ವ್ಯಕ್ತಿಯು ವಾದಿ ಎಂದರೆ ಸರಿ. ನಿಪಿ 3 ರಿಂದ 5 ರಲ್ಲಿ ಎಲ್ಲಿಯೂ ಕೂಡ ಪ್ರತಿವಾದಿಯು ಧನಕರುಗಳನ್ನು ಕಟ್ಟಲು ಮಾಡಿಕೊಂಡಿದ್ದಾರೆ ಎಂದು ಹೇಳಲಾಗುವ ಶೆಡ್ ಕಾಣುವುದಿಲ್ಲ ಎಂದರೆ ಸರಿ.

3. ದಾವಾ ಸ್ವತ್ತು ಆಗಿನ ಮಂಡಲಪಂಚಾಯಿತಿಯು ಮಂಜೂರು ಮಾಡಿದ್ದು ವಾದಿಯೇ ಸ್ವಾಧೀನಾನುಬೋಗದಲ್ಲಿ ಇದ್ದರೂ ಕೂಡ ನಾನು ಪ್ರತಿವಾದಿಯ ಸ್ವಾಧೀನಾನುಬೋಗದಲ್ಲಿ ಇದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಪ್ರತಿವಾದಿಯ ಹೆಸರಿಗೆ ಪಂಚಾಯಿತಿಯಿಂದ ಯಾವುದಾದರೂ ದಾಖಲಾತಿಗಳು ಆಗಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಆಗಿರಬಹುದು ನನಗೆ ಗೊತ್ತಿಲ್ಲ ಎಂದು ಉತ್ತರಿಸುವರು.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ.** **ನನ್ನ ಸಮಕ್ಷಮ**

**ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.**